ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

जुलै-सितंबर २०१६

त्रैमासिक पत्रिका



Scanned by CamScanner

# ಪರಿವಿಡಿ


೧. "ಮತ್ತೆ ಕಲ್ಯಾಣ" • ಪ್ರೊ. ಬಿ. ಬಿ. ಡೆಂಗನವರ ೧೫

೨. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಥನ ಕವನ : ಒಂದು ಅವಲೋಕನ • ಡಾ. ಆರ್. ವಿ. ಪಾಟೀಲ ೨೦

೩. ಯುವ ಜನತೆಯಲ್ಲಿ ಕೌಶಲ್ಯ ಅಭಿವೃದ್ಧಿ ಉತ್ತೇಜನದ ಅವಶ್ಯಕತೆ • ಡಾ. ಫಕೀರನಾಯ್ಕ ಡಿ. ಗಡ್ಡಿಗೌಡರ ೨೪

೪. ತಳ ಸಮುದಾಯಗಳ ನ್ಯಾಯಾಂಗ ವ್ಯವಸ್ಥೆ • ಶಶಿಕಲಾ ಟಿ. ೨೬

೫. ಸಾಮಾಜಿಕ ಬದಲಾವಣೆಯ ಸಿದ್ಧಾಂತ ಮತ್ತು ಮಾದಿಗ ಸಮುದಾಯ • ರಾಜಣ್ಣ ಡಿ. ೩೩

೬. ಮರಾಠಿ ದಲಿತ ಆತ್ಮಕಥೆಗಳು (ಕನ್ನಡ ಅನುವಾದ ಅನುಲಕ್ಷಿಸಿ) • ಎ. ಕೆ. ಜಯವೀರ ೩೮

೭. ಕನ್ನಡ ಕಾವ್ಯದ ಬಹುಮುಖಿ ನೆಲೆಗಳು • ಪ್ರೊ. ಶ್ರೀಮತಿ ದೀಪಾ ಸಂಕಪಾಳೆ ೪೩

೮. ಆಯ್ದ ಕೃತಿಗಳಲ್ಲಿ 'ದೇವರು' ಪರಿಕಲ್ಪನೆಯ ವಿಶ್ಲೇಷಣೆ • ಅನಿತಾ ಟಿ. ಎಂ. ೪೮


ಅಂಕಣ–೨


೯. ನಾವೇಕೆ ಹೀಗಾಗುತ್ತಿದ್ದೇವೆ • ಡಾ. ಆರ್. ವ್ಹಿ. ಪಾಟೀಲ ೫೧




Scanned by CamScanner

# "ಮತ್ತೆ ಕಲ್ಯಾಣ"

• ಪ್ರೊ. ಬಿ. ಬಿ. ಡೆಂಗನವರ

ಸೂರ್ಯನುದಯ ತಾವರೆಗೆ ಜೀವಾಳ
ಚಂದ್ರನುದಯ ನೆಯ್ದಿಲೆಗೆ ಜೀವಾಳ
ಕೂಪರ ಠಾವಿನಲ್ಲಿ ಕೂಟ ಜೀವಾಳವಯ್ಯಾ।
ಒಲಿದ ಠಾವಿನಲ್ಲಿ ನೋಟ ಜೀವಾಳವಯ್ಯಾ
ಕೂಡಲಸಂಗನ ಶರಣರ ಬರುವೆಮಗೆ
ಪ್ರಾಣ ಜೀವಾಳವಯ್ಯಾ॥

ಲೋಕ ಕಲ್ಯಾಣಕ್ಕಾಗಿ ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿದರು, ವರ್ಣ, ವರ್ಗ, ಲಿಂಗ ತಾರತಮ್ಯವಿಲ್ಲದ ಸುಖಿಸಮಾಜ ಕಟ್ಟುವ ಬಸವಣ್ಣನವರ ಸಂಕಲ್ಪಕ್ಕೆ ಅದು ಬುನಾದಿಯಾಗಿತ್ತು. ಅದಕ್ಕೆ ಅಧ್ಯಕ್ಷರನ್ನಾಗಿ ಅಲ್ಲಮನನ್ನು ಕೂಡ್ರಿಸಿದರು ಅದಕ್ಕೆ ಶೂನ್ಯ ಪೀಠವೆಂದು ಹೆಸರಿಸಿದರು ಅನುಭವಮಂಟಪವು ಮುಕ್ತ ಅಧ್ಯಾತ್ಮ ಕೇಂದ್ರವಾಗಿತ್ತು. ಜನತಾ ಪಾರ್ಲಿಮೆಂಟ ಆಗಿತ್ತು. ಸಮಾಜದ ಎಲ್ಲ ಸ್ತರಗಳಿಂದ ದೇಶ ವಿದೇಶಗಳಿಂದ ಬಂದಿದ್ದ ಸಾಧಕರೆಲ್ಲ ಅಲ್ಲಿ ಸೇರಿ ಚಿಂತನೆ ನಡೆಸಿದರು. ಅದೊಂದು ಇಹ ಪರ ಚಿಂತನೆಯ ಪ್ರಯೋಗಶಾಲೆಯಾಗಿತ್ತು, ಅನುಭವ ಮಂಟಪದಲ್ಲಿ ಶರಣರು ಚರ್ಚಿಸಿದ ವಿಷಯಗಳು ವಚನರೂಪವಾಗಿ ಹೊರಹೊಮ್ಮಿದವು ವಚನ ಸಾಹಿತ್ಯವು ಶರಣರು ಜಗತ್ತಿಗೆ ಕೊಟ್ಟ ದೊಡ್ಡ ಕೊಡುಗೆಯಾಗಿದೆ.

ವರ್ಣಾಶ್ರಮ ಪದ್ಧತಿ ಶ್ರೇಣಿ ಕೃತ ಸಮಾಜ ವ್ಯವಸ್ಥೆಯಲ್ಲಿ ಕೆಳಜಾತಿ ಕೆಳವರ್ಗದವರ ಬಾಳು ಅಸಹನೀಯವಾಗಿತ್ತು. ಅವರ ಬದುಕು ಪ್ರಾಣಿಗಳಿಗಿಂತಲೂ ಕಡೆಯಾಗಿತ್ತು. ಅವರ ಬವಣೆ ಕಂಡು ಕರುಣಾಳು ಬಸವಣ್ಣನ ಜೀವ ಮಮ್ಮಲ ಮರುಗಿತು, ಅವರ ಉದ್ಧಾರಕ್ಕಾಗಿ ಹಗಲಿರುಳು ಅವರ ಮನಸ್ಸು ಚಿಂತಿಸಿತು.

ಹುಟ್ಟಿನಿಂದ ಯಾರು ದೊಡ್ಡವರಲ್ಲ, ಚಿಕ್ಕವರಲ್ಲ ಹುಟ್ಟು ಸಾವು ಎಲ್ಲರಿಗೂ ಒಂದೆ, ಕಾಸಿಕಮಾರನಾದ, ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ ಎಂದು ಹೇಳಿ ಜಾತಿ ಭೇದ ನಿರಸನಗೈದರು, ಶ್ರೇಣಿಕೃತ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿ ವೈಚಾರಿಕ ಪ್ರಜ್ಞೆ ಬೆಳೆಸಿದರು.

ಮೂಢನಂಬಿಕೆ, ಸಾಮಾಜಿಕ ಅನಿಷ್ಟ ಪದ್ಧತಿಗಳನ್ನೆಲ್ಲ ಅಲ್ಲಗಳೆದು ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ ಕುಲಜರು ನಮ್ಮ ಶರಣರು ಎಂದು ಹೇಳುತ್ತ "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂದು ಹೇಳಿ ತಮ್ಮ ಔದಾರ್ಯತೆಯನ್ನು ತೋರಿದ್ದಾರೆ.

"ಆಚಾರವೇ ಸ್ವರ್ಗ, ಅನಾಚಾರವೆ ನರಕ" ಎಂದಿದ್ದಾರೆ. ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ.

ಕೂಡಿಡುವ ಸಂಸ್ಕೃತಿ ತುಂಬ ಅಪಾಯಕಾರಿ ಇದರಿಂದ ವ್ಯಕ್ತಿಯಲ್ಲಿ ಸ್ವಾರ್ಥ, ಅಹಂಕಾರ, ಪ್ರತಿಷ್ಠೆ, ಮೇಲರಿಮೆ ಮುಂತಾದ ಅಹಂಕಾರಿ ದುರ್ಗುಣಗಳು ಗರಿಗಟ್ಟಿಗೊಳ್ಳುತ್ತವೆ.

ಕಲ್ಯಾಣದ ಶಿವಶರಣರನ್ನು ಕುರಿತು ಅಧ್ಯಾತ್ಮದ ಕಲ್ಪವೃಕ್ಷ ಅಕ್ಕಮಹಾದೇವಿ ಹೀಗೆ ಹಾಡಿದ್ದಾರೆ.

ಬಸವಣ್ಣನ ಭಕ್ತಿ ಚೆನ್ನಬಸವಣ್ಣನ ಜ್ಞಾನ
ಮಡಿವಾಳಯ್ಯನ ನಿಷ್ಠೆ ಪ್ರಭುದೇವರ ಜಂಗಮಸ್ಥಲ
ಅಜಗಣ್ಣನ ಐಕ್ಯಸ್ಥಲ ನಿಜಗುಣನ ಆರೂಢಸ್ಥಲ
ಸಿದ್ಧರಾಮಯ್ಯನ ಸಮಾಧಿ ಸ್ಥಲ ಇಂತಿವರ ಕರುಣ ಪ್ರಸಾದ।
ಎನಗಾಯಿತ್ತು ಚೆನ್ನಮಲ್ಲಿಕಾರ್ಜುನಯ್ಯ
ಎಂದು ಸಕಲ ಶರಣರಿಗೆ ತನ್ನ ಕೃತಜ್ಞತೆ ಸಲ್ಲಿಸುತ್ತಾಳೆ॥



Scanned by CamScanner

ಶರಣರ ಹೃಯದಂತಿದ್ದ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂದಟಪದಲ್ಲಿ ಭಿನ್ನ ಭಿನ್ನ ವಿಚಾರ ವಿನಿಮಯ ನಡೆಸುತ್ತಿದ್ದರು. ಕೆಳವರ್ಗದವರನ್ನು ಆರ್ಥಿಕ, ಸಮಾಜಿಕ, ಶೈಕ್ಷಣಿಕವಾಗಿ ಮೇಲೆತ್ತಲು ಸಮಾಜದ ಒಳಿತಿಗಾಗಿ ಮೂಢಾಚಾರ ಶುಷ್ಕಾಚಾರಗಳನ್ನು ತಡೆಯಲು ಕುಲಜಾತಿ ಕಸಬು ಮೊದಲಾದ ಭೇದ ಭಾವ ಅಳಿಸಲು ಕಾರ್ಯ ತತ್ಪರರಾಗಿದ್ದರು ಅವರ ವೈಚಾರಿಕ ಪ್ರಜ್ಞೆಯೇ ವಚನಮೂಲಕ ಹೊರಹೊಮ್ಮಿತು.

ಭಕ್ತಿಯಿಲ್ಲದ ಬಡವನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ
ಚೆನ್ನಯ್ಯನ ಮನೆಯಲ್ಲೂ ಬೇಡಿದೆ।
ಎಲ್ಲ ಪುರಾತನರು ನೆರೆದು ಭಕ್ತಿ ಬಿಕ್ಷೆಯನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲ ಸಂಗಮದೇವಾ॥

ಬಸವಣ್ಣನವರು ಈ ಮೇಲಿನ ವಚನದಲ್ಲಿ ತಮ್ಮ ಸಮಕಾಲಿನ ಹಿರಿಯ ಶರಣರನ್ನು ಮನಸಾರೆ ಸ್ತುತಿಸಿದ್ದಾರೆ.

"ಆರಂಭ ಮಾಡುವೆ ಗುರು ಪೂಜೆಗೆಂದು
ಬೆವಹಾರವಮಾಡುವೆ ಲಿಂಗಾರ್ಚನೆಗೆಂದು
ಪರಸೇವೆ ಮಾಡುವೆ ಜಂಗಮ ದಾಸೋಹಕ್ಕೆಂದು"

ನಾನು ಯಾವ ಕಾರ್ಯಕೈಕೊಂಡರು ಅದು ಗುರುಲಿಂಗ ಜಂಗಮ ಸೇವೆಗಾಗಿ ಅರ್ಪಿತ ಎಂದು ಯುಗದ ಉತ್ಸಾಹಿ ಮಹಾಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದ ಶರಣರು ಮನುಕುಲದ ಏಳ್ಗೆಗಾಗಿ ಕಾಯಕ ಸಿದ್ಧಾಂತವನ್ನು ತಂದರು.

ದುಡಿಯದೇ ದುಃಖಪಡದೆ ಕುಳಿತು ತಿನ್ನುವ ಪುರೋಹಿತ ಶಾಹಿಯನ್ನು ದಿಕ್ಕರಿಸಿ ಕಾಯಕ ಜೀವಿಗಳಿಗೆ ಗೌರವದ ಸ್ಥಾನ ದೊರಕಿಸಿಕೊಟ್ಟರು ಕಾಯಕದಲ್ಲಿಯೇ ಗುರು, ಲಿಂಗ,ಜಂಗಮವನ್ನುಕಂಡು ಕಾಯಕವೇ ಕೈಲಾಸವೆಂದು ಸಾರಿದರು.

ಗುರುವಾದರೂ ಕಾಯಕದಿಂದಲೇ ಜೀವನಮುಕ್ತಿ 'ಅನುಭವ ಮಂಟಪ' ಎನ್ನುವ ಧರ್ಮ ಸಂಪತ್ತನ್ನು ಸ್ಥಾಪಿಸಿದರು. ಪರಂಪರೆಯಿಂದ ಬಂದಿದ್ದ ಧರ್ಮದಲ್ಲಿಯ ಅಸಮಾನತೆಗಳ ವಿರುದ್ಧ ಸಾತ್ವಿಕವಾಗಿಯೇ ಪ್ರತಿಭಟಿಸಿ ಹೊಸ ಧರ್ಮವೊಂದಕ್ಕೆ ನಾಂದಿ ಹಾಡಿದರು. ಈ ಧರ್ಮದ ಆಧಾರ ಸ್ತಂಬಗಳು, ಕಾಯಕ, ದಾಸೋಹ, ಇಷ್ಟಲಿಂಗ ಪೂಜೆ, ಇನ್ನೂ ಮುಂದೆವರೆದು ಹೇಳುವುದಾದರೆ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳೇ ಈ ಧರ್ಮದ ಸೂತ್ರಗಳು.

ಶಿವನೊಲಿದರೆ ಅಸಾಧ್ಯವೂ ಸಾಧ್ಯ ಎನ್ನುವ ವಿಶ್ವಾಸ ಬಸವಣ್ಣನವರದು.

ಕರ್ಮಣ್ಯೇವಾದಿಕಾರಸ್ತೇ ಮಾಫಲೇಸುಕದಾಚನ ಎನ್ನುವ ಗೀತೆಯ ಮಾತು ಎಲ್ಲರಿಗೂ ಪರಿಚಿತವಾದುದ್ದೇ ಆಗಿದೆ. ನಿನ್ನ ಪಾಲಿನ ಕೆಲಸ ನೀನು ಮಾಡು ಫಲದ ಬಗ್ಗೆ ಯೋಚಿಸದಿರು ಎಂಬುದು ಇದರ ತಾತ್ಪರ್ಯ.

ಇಡೀ ಶರಣಸಂಕುಲದ ಚಿಂತನೆಯ ಕೇಂದ್ರ ಬಿಂದು ವ್ಯಷ್ಟಿ ಮತ್ತು ಸಮಷ್ಟಿ ಪಜ್ಞೆಯಾಗಿದೆ. ಇಷ್ಟಲಿಂಗವೇ ವ್ಯಷ್ಟಿ ಪ್ರಜ್ಞೆ ಜಂಗಮಲಿಂಗವೇ ಸಮಷ್ಟಿ ಪ್ರಜ್ಞೆ.

ಕನ್ನಡ ಸಾಹಿತ್ಯದಲ್ಲಿ ಕನ್ನಡ ಜನಮಾನಸದಲ್ಲಿ ಎಂದೆಂದಿಗೂ ಮರೆಯದ "ನಃ ಭೂತೋ ನಃಭವಿಷ್ಯತಿ" ಎನ್ನುವಂತಿರುವ ಕಾಲ ಘಟ್ಟ ಹನ್ನೆರಡನೆಯ ಶತಮಾನ. ಇದರ ನಿಜವಾದ ವಾರಾಸುದಾರರು ಕಲ್ಯಾಣದ ಶಿವಶರಣರು.

ಶರಣರ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಳುವಳಿಯು ಜಾಗತಿಕ ಇತಿಹಾಸದಲ್ಲಿಯೇ ಒಂದು ಅಪೂರ್ವ ಘಟನೆ, ಅವರ ಚಿಂತನೆ, ಸಾಹಿತ್ಯಿಕ ಕೃಷಿ-ನಿಜಕ್ಕೂ ಅನನ್ಯವಾದುದು ವರ್ಗ, ವರ್ಣ, ಜಾತಿ, ಮತ, ಪಂಥ, ಲಿಂಗ ಭೇದಗಳನ್ನೆಲ್ಲ ದೂರೀಕರಿಸಿ ಸಕಲ ಸಮೂದಾಯದ ಜನರನ್ನೆಲ್ಲ ಏಕಛತ್ರದಡಿಯಲ್ಲಿ ತಂದು ನಿಲ್ಲಿಸಿದ ಸುವರ್ಣಕಾಲ, ಬಸವಣ್ಣನವರ ನೇತೃತ್ವದಲ್ಲಿ ನಡೆದ ಲೋಕ ಕಲ್ಯಾಣದ ಕಾರ್ಯದಲ್ಲಿ ಎಲ್ಲರೂ ಒಂದಾಗುವಂತೆ ಮಾಡಿದ ಅವಿಸ್ಮರಣೀಯ ಕಾಲ ಬಾನಂಗಳದ ಬೆಳಗನ್ನು ಧರೆಗೆ ತಂದಿಳಿಸಿ ಧರೆಯ ಕಲ್ಯಾಣವನ್ನು ಮಾಡಿದ ಶ್ರೇಯಸ್ಸು ಶರಣರ ಬೆನ್ನಿಗಿದೆ.

ಶರಣರು ಜೀವನವನ್ನು ತೆರೆದ ಕಣ್ಣುಗಳಿಂದ ನೋಡಿದವರು ಸುತ್ತಮುತ್ತಲಿನ ಜನರ ದುಃಖ ಅಜ್ಞಾನ, ಅಂದಶ್ರದ್ಧೆ, ಅನಾಚಾರಗಳನ್ನು ಕಂಡು ಮರುಗಿದವರು ಶರಣರು ತಾವು ಕಂಡುಂಡ ಅನುಭವದ ಅಭಿವ್ಯಕ್ತಿಗಾಗಿ ಆಯ್ದುಕೊಂಡ ಸರಳ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಮೊದಲು ಸೃಷ್ಟಿಸಿದ ಕೀರ್ತಿ ಶರಣರಿಗೆ ಸಲ್ಲುತ್ತದೆ. ಇದು ಅವರ ಒಂದು ಅನನ್ಯ ಪ್ರಯೋಗ, ವ್ಯಕ್ತಿ ಕಲ್ಯಾಣ, ಸಮಾಜಕಲ್ಯಾಣ, ಲೋಕಕಲ್ಯಾಣ ಚಳಿವಳಿಯ ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವಾಗಿವೆ. "ನುಡಿದಂತೆ ನಡೆದ" ಆತ್ಮ ಸಾಕ್ಷಿಯ ವಾಣಿ ವಚನವೆನಿಸಿಕೊಳ್ಳುತ್ತದೆ. ಅನುಭಾವಿಗಳಿಂದ ಸೃಷ್ಟಿಯಾದ ಈ ವಚನ ಸಾಹಿತ್ಯ ಗಧ್ಯವೂ ಹೌದು ಪದ್ಯವೂ ಹೌದು ಇದನ್ನು ಗದ್ಯದಂತೆ ಗೇಯ ಪೂರ್ಣ ರಾಗಬದ್ಧವಾಗಿ ಹಾಡಿ ಅನಂದಿಸಬಹುದು.



Scanned by CamScanner

ಹೀಗಾಗಿಯೇ ವಚನಗಳು ಶರಣರು ಕೊಟ್ಟ ದೊಡ್ಡ ಜಾಗತಿಕ ಕೊಡುಗೆಯಾಗಿದೆ.

ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಈ ಮಹತ್ ಕಾರ್ಯಕ್ಕೆ ಬಸವಣ್ಣ ಮುಂಚೂಣಿಯಲ್ಲಿದ್ದರೆ ಅವನ ಹೆಗಲಿಗೆ ಹೆಗಲು ಕೊಟ್ಟು ದುಡಿದ ಶರಣರಲ್ಲಿ ಅಲ್ಲಂಪ್ರಭು ಶೂನ್ಯಸಿಂಹಾಸನಕ್ಕೆ ಅಧಿಪತಿಯಾದರೆ ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಮುಕ್ತಾಯಕ್ಕ ಆಯ್ದಕ್ಕಿಲಕ್ಕಮ್ಮ, ಸತ್ಯಕ್ಕ ಅಕ್ಕನಾಗಮ್ಮ, ಲಿಂಗಮ್ಮ, ಆಮುಗೆರಾಯಮ್ಮ, ನೀಲಾಂಬಿಕೆ ಇಂತಹ ನೂರಾರು ಶರಣ ಶರಣೆಯರು ಅವತರಿಸಿದ ಕನ್ನಡದ ಪುಣ್ಯ ಭೂಮಿಯಲ್ಲಿ ನಾವುಗಳೆಲ್ಲ ಜನಸಿರುವುದು ನಮ್ಮ ಸೌಭಾಗ್ಯವೆ ಸರಿ.

ಶರಣರು ನಿಜವಾಗಿ ಇಡೀ ಮಾನುಕುಲಕ್ಕೆ ಮಾರ್ಗದರ್ಶನವಾಗಬಲ್ಲಂತಹ ಕೊಟ್ಟ ಕೊಡುಗೆಯೆಂದರೆ ಕಾಯಕ ನಿಷ್ಠೆಯಾಗಿದೆ. ದುಡಿದು ಬದುಕುವ ಶ್ರಮ ಸಂಸ್ಕೃತಿಯನ್ನು ಗೌರವಿಸಿದ್ದಾರೆ. ಕಾಯಕದಲ್ಲಿ ಮೇಲು ಕೀಳು ಎಂಬುವದಿಲ್ಲ ಅವರು ಮೈಮುರಿದು ದುಡಿದು ಬೆವರು ಸುರಿಸಿ ಹೆಚ್ಚಿನದನ್ನು ಬಯಸದೆ ಬಂದುದರಲ್ಲಿ ತಾವು ಬದುಕಿ ತಮ್ಮವರನ್ನು ಬದುಕಿಸಿ ದಾಸೋಹದ ಕಾರ್ಯಕ್ಕೂ ಮೀಸಲಿಡುತ್ತಿದ್ದ ಅವರ ಹೃದಯ ವೈಶಾಲ್ಯತೆ ನಿಜಕ್ಕೂ ಸ್ಮರಣೀಯವಾಗಿದೆ.

"ಅಣುರೇಣು ತೃಣ ಕಾಷ್ಠಗಳಲ್ಲೆಲ್ಲ" ಅಡಗಿರುವ "ವಿಶ್ವತೋಬಾಹು ವಿಶ್ವತೋ ಚಕ್ಷು, ವಿಶ್ವತೋ" ರೂಪವಾಗಿರುವ ಅವರವರ ಭಾವಕ್ಕೆ ಅವರವರ ಭಕುತಿಗೆ ಅವರವರ ತೆರನಾಗಿ ಕಾಣುವ ಮಹಾಚೇತನ ಅನಲದಲ್ಲಿಡಗಿದ ಅನಿಲದಂತೆ ಕ್ಷೀರದಲ್ಲಿಡಗಿದ ಘೃತದಂತೆ, ಕಾಷ್ಠದಲ್ಲಡಗಿದ ಅಗ್ನಿಯಂತೆ ದೇವರ ಸ್ವರೂಪವಿದೆ. ಆತನ ಅಸ್ತಿತ್ವ ಉಪಮಿಸಲೂ ಬಾರದು ಇಡೀ ಸೃಷ್ಟಿಯ ಸ್ಥಿತಿಗತಿಗೆ ಕಾರಣವಾದ ಒಂದು ಅಗೋಚರ ಶಕ್ತಿ ಇರುವದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಲಕ್ಷೋಪಲಕ್ಷ ಜೀವರಾಶಿಗಳು ಎಣಿಕೆಗೆ ನಿಲುಕದಷ್ಟು ಸಸ್ಯರಾಶಿ, ಅಗಣಿತಗ್ರಹ, ನಕ್ಷತ್ರಗಳ ಇರುವಿಕೆಯನ್ನು ಗಮನಿಸಿದರೆ ದೇವರ ಅಸ್ತಿತ್ವವನ್ನು ಅಲ್ಲಗಳೆಯಲಾಗದು. ಆದಕ್ಕೆಂದೆ ಎಲ್ಲ ಧರ್ಮ ಪಂಥಗಳು ಕಾಣದ ಶಕ್ತಿಯನ್ನು ಭಯ ಭಕ್ತಿಯಿಂದ ದೈವದ ಹೆಸರನಿಲ್ಲಿ ಪೂಜೆ ಪ್ರಾರ್ಥನೆ ಗೈಯ್ಯುತಲಿದ್ದಾರೆ. ಗುರುಹೇಳಿದ ಪ್ರಣವ ಪಂಚಾಕ್ಷರಿ ಮಂತ್ರಪಠಿಸುತ್ತ ಗುರು, ಲಿಂಗ, ಜಂಗಮ ಸೇವೆ ಮಾಡುತ್ತ ತನ್ನ ಈ ತಾದಾತ್ಮತೆಯನ್ನು ವೃದ್ಧಿಸಿಕೊಳ್ಳುತ್ತ ಭಕ್ತನಾಗಿ, ಮಹೇಶನಾಗಿ, ಪ್ರಸಾದಿ ಪ್ರಾಣಲಿಂಗಿಯಾಗಿ ಅದರ ಮುಂದಿನ ಮೆಟ್ಟಲನ್ನು ಏರಿ ನಿಂತವನೇ ಶರಣ. ಶರಣನ ತನುಶುದ್ಧ, ಮನಶುದ್ಧ, ಆತನ ನಡೆಶುದ್ಧ, ನುಡಿಶುದ್ಧ ಅದಕ್ಕೆಂದೆ ಶರಣರನ್ನು ಮನತುಂಬಿ ಹಾಡಿ ಹೊಗಳಿದ್ದಾರೆ.

ಶಿವಶರಣರ ಬದುಕು, ಗಾಳಿ ಸೊಂಕದ, ದುಂಬಿಮುಟ್ಟದ, ರವಿಕರಂಪುಗದ, ಪರಿಮಳ ತುಂಬಿದ ವೈವಿಧ್ಯಮಯ ಪುಷ್ಪಗಳಿದ್ದಂತೆ ಒಂದೊಂದರಲ್ಲಿ ಒಂದೊಂದು ಹೊಸ ಕಂಪು ಹೊರಸೂಸುವಂತೆ ಒಬ್ಬೊಬ್ಬ ಶಿವರಣನ ಜೀವನ ವೈಶಿಷ್ಟ್ಯ ಪೂರ್ಣವಾಗಿದೆ.

ಧಾರ್ಮಿಕವಾಗಿ, ನೈತಿಕವಾಗಿ, ಆಧ್ಯಾತ್ಮಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಾಮಾಜಿಕವಾಗಿ ಹಾಗೂ ಸಾಹಿತ್ಯಕವಾಗಿ ಸತ್ತಂತಿದ್ದ ಜನರನ್ನು–ದಲಿತರನ್ನು ಶೂದ್ರರನ್ನು, ಶೋಷಿತರನ್ನು, ಸ್ತ್ರೀಯರನ್ನು ಎಚ್ಚರಿಸಿ ಅವರಲ್ಲಿ ಚೈತನ್ಯವನ್ನು ತುಂಬಿ ಅವರನ್ನು ಮೇಲೆತ್ತಿದ ಬಸವೇಶ್ವರರು ಲೋಕೋತ್ತರ ಮೂರ್ತಿ ಸಾರ್ವತ್ರಿಕ ಸಾರ್ವಕಾಲಿಕ ಮಾನವ ಕಲ್ಯಾಣದ–ಶಿಲ್ಪಿ, ದಯಾಮೂರ್ತಿ, ವಿನಯಭಂಡಾರಿ, ವಿಶ್ವ–ಮಾನವಪ್ರೇಮಿ, ಜನತಾಧರ್ಮಿ, ನ್ಯಾಯನಿಷ್ಠೂರಿ, ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬನಡೆ ನುಡಿಗಳಿಂದ ದಿನದಲಿತ–ನೊಂದಬೆಂದ ಸಾಮಾನ್ಯ ಜನತೆಯನ್ನು ದೇವತ್ವದೆಡೆಗೆ ಕರೆದೊಯ್ದವರುಮನುಕುಲದ ಉದ್ಧಾರಕರು.

ಸಮಕಾಲಿನ ಸಮಾಜದಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯತೆ–ಅಂಧಸಂಪ್ರದಾಯ ಡಾಂಭಿಕ ಪೂಜೆಗಳ ವಿರುದ್ಧ ಪ್ರತಿಭಟಿಸಿ ಜಡತ್ವವನ್ನು ಕಂದಾಚಾರಗಳನ್ನು ಟೀಕಿಸಿ ವಿಮರ್ಶಿಸಿ "ಆನೊಲಿದಂತೆ ಹಾಡುವೆ" ಎಂದಿದ್ದಾರೆ.

"ಸ್ಥಾವರಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಅವರ ಒಂದು ವಚನದ ಮಾತಿನಲ್ಲಿರುವ 'ಸ್ಥಾವರ' ಎಂಬ ಶಬ್ದ ಜಡತ್ವವನ್ನೂ, ನಾಶವಾಗುವುದುದನ್ನೂ ಸೂಚಿಸುತ್ತದೆ. ಅಷ್ಟೇ ಅಲ್ಲ, ಅಗ್ರಹಾರ ಸಂಸ್ಕೃತಿ, ದೇವಾಲಯ ಸಂಸ್ಕೃತಿ, ರಾಜಾಧಿಕಾರ ಸಂಸ್ಕೃತಿಗಳೆಂಬ ಸ್ಥಗಿತ ನಿಲುವುಗಳ ವಿರುದ್ಧ ಬಸವಣ್ಣನವರು ಬಂಡಾಯವೆದ್ದಿದ್ದಾರೆ "ಜಂಗಮ" ಎಂಬ ಶಬ್ದ ಚೈತನ್ಯವನ್ನೂ ಸ್ಥಿತ್ಯಂತರಗಳಿಗೆ ತಕ್ಕಂತೆ ಹೊಂದಿಕೊಂಡು ಹೋಗುವ ಚಿರಂತನತ್ವವನ್ನೂ ಧ್ವನಿಸುತ್ತದೆ.

ವಚನ ಚಳುವಳಿ ಕನ್ನಡದ ನೆಲದಲ್ಲಿ ಸಂಘಟಿತಗೊಂಡ ಮೊತ್ತಮೊದಲ ಮಾನವಿಕ ಬಂಡಾಯ ವೇದಗಳ ವಿರುದ್ಧದ ದೇಶಿ ಚಳುವಳಿ ಸಂಸ್ಕೃತ ಮತ್ತು ಆರ್ಯ ಸಂಸ್ಕೃತಿಯ ಪ್ರಸಾರಕ್ಕೆ ತಡೆಯೊಡ್ಡಿದ ಬೃಹತ್ ಕನ್ನಡ ಪ್ರತಿಭಟನೆಯನ್ನು ಈ ಒಂದು ವಚನದಲ್ಲಿ ಕಾಣಬಹುದು.



Scanned by CamScanner

"ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳ ನಿಕ್ಕುವೆ ತರ್ಕದ ಬೆನ್ನು ಬಾರನೆತ್ತುವೆ ಆಗಮದ ಮೂಗ ಕೊಯ್ಯುವೆ"

ಎಂದು ಅಸಮಾಧಾನವನ್ನು ಹೊರ ಹಾಕಿದ್ದಾರೆ, ಅಗ್ರಹಾರ ಸಂಸ್ಕೃತಿಯ ವಿರುದ್ಧ ಸಿಡಿದೆದ್ದಾರೆ. ವಚನಕಾರರು ಸಾಹಿತ್ಯ ಸೃಷ್ಟಿಗೆಂದೇ ವಚನಗಳನ್ನು ಬರೆದ ವರಲ್ಲವಾದರೂ ಬದುಕನ್ನು ಹಾಗೂ ಬದುಕಿನ ಮೌಲ್ಯಗಳನ್ನು ಹುಡುಕಿ ಕಟ್ಟುವ ಪ್ರಯತ್ನವಾಗಿ ವಚನಗಳನ್ನು ರಚಿಸಿದರು.

ಶರಣರು ಶಿವಭಕ್ತರು ಆದರೆ ಪೂಜಾರಿಗಳಲ್ಲ, ಬಂಡಾಯಗಾರರು ಆದ್ದರಿಂದಲೇ ವಚನ ಸಾಹಿತ್ಯ ಬಂಡಾಯ ಸಾಹಿತ್ಯ ಕಲ್ಯಾಣದ ಕ್ರಾಂತಿಯನ್ನು ಕೇವಲ ಹರಳಯ್ಯ ಮದುವಯ್ಯಗಳ ಮಕ್ಕಳ ಮದುವೆಗೆ ಸೀಮಿತಗೊಳಿಸಿ ನೋಡಲಾರದು ಒಟ್ಟೊಟ್ಟು ಶರಣರ ಬದುಕೂ ವಚನಕ್ರಾಂತಿಯ ಪ್ರಯೋಗಶಾಲೆ ಸತ್ಯ, ಸಮಾನತೆ-ಸ್ವಾಭಿಮಾನ-ಸರ್ವೋದಯ, ಗ್ರಾಮ ಇವು ವಚನ ಸಾಹಿತ್ಯದ (ಪಂಚಾಚಾರಗಳು) ಪಂಚಪ್ರಾಣಗಳು.

ಸಮಾಜದಲ್ಲಿ ಸರ್ವಸಮಾನತೆ ನೆಲೆಗೊಳಿಸಲು ವಿಶಿಷ್ಟ ಆಂದೋಲನವೇ ಬಸವಾದಿ ಶಿವಶರಣರಿಂದ ನಡೆಯಿತು. ಅದು ನಡೆದದ್ದು ಕನ್ನಡ ನೆಲದಲ್ಲಿ ಎಂಬುದು ಕನ್ನಡಿಗರೆಲ್ಲರೂ ಹೆಮ್ಮೆ ಪಡುವಂತ ವಿಷಯ. ಈ ಆಂದೋಲನದ ಕೇಂದ್ರ ವ್ಯಕ್ತಿ ಬಸವಣ್ಣನವರು ಕಾಯಕ, ದಾಸೋಹ ಮತ್ತು ದೇಹವೇ ದೇಗುಲ ಎನ್ನುವ ತತ್ತ್ವ ಸಿದ್ಧಾಂತಗಳು ಇವುಗಳ ಮೂಲಕ ಎಲ್ಲ ಕೆಲಸಗಳೂ ಸಮಾನವೆಂದು ತೋರಿಸಿಕೊಟ್ಟರು ವೃತ್ತಿ ಗೌರವವನ್ನು ಎತ್ತಿಹಿಡಿದರು. ದಾಸೋಹ ಪ್ರಜ್ಞೆಯ ಮೂಲಕ ಆರ್ಥಿಕ ಸಮಾನತೆ ನೆಲೆಗೊಳಿಸಿದರು. ಇಷ್ಟಲಿಂಗ ಪೂಜೆಯ ಮೂಲಕ ಪೂಜಾರಿ ಪುರೋಹಿತರ ಕಪಿಮುಷ್ಠಿಯಿಂದ ಮುಕ್ತಗೊಳಿಸಿದರು. ಒಟ್ಟಾರೆ ಸುಖೀ ಜೀವನಕ್ಕೆ ಬೇಕಾದಂತಹ ಸೂತ್ರಗಳನ್ನು ಸರಳವಾಗಿ ನೀಡಿದರು.

ಇಂದು ಸಮಾಜದಲ್ಲಿ ಒಂದು ರೀತಿ ಶೂನ್ಯ ಆವರಿಸಿದೆ, ಮೌಲ್ಯಗಳು ಅಪಮೌಲ್ಯಗೊಳ್ಳುತ್ತಿವೆ. ಈ ನೆಲೆಯಲ್ಲಿ ಬಸವಾದಿ ಶಿವಶರಣರ ಸಂದೇಶವನ್ನು ಯುವಪೀಳಿಗೆಗೆ ತಲುಪಿಸುವ ಕಾರ್ಯ ನಡೆಯಬೇಕಾಗಿದೆ. ಈ ನೆಲೆಯಲ್ಲಿ 'ಮತ್ತೆ ಕಲ್ಯಾಣ' ಎನ್ನುವ ಅಭಿಯಾನವನ್ನು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ಮತ್ತೆ ಕಲ್ಯಾಣ' ಕಾರ್ಯಕ್ರಮ ಜಿಲ್ಲಾಕೇಂದ್ರಗಳಲ್ಲಿ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದದೊಂದಿಗೆ ಕಾರ್ಯಕ್ರಮವನ್ನು ಸಾಣೆಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳ ನೇತೃತ್ವದಲ್ಲಿ ನಡೆಯುತ್ತಿರುವುದು ಅತ್ಯಂತ ಸ್ತುತ್ಯಾರ್ಹ ಕಾರ್ಯವಾಗಿದೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ನಡೆಯುವಂತೆ ವಿಜಯಪುರದ ಬಿ.ಎಲ್.ಡಿ.ಇ ಸಂಸ್ಥೆಯ ವೈದ್ಯಕೀಯ ವಿಶ್ವವಿದ್ಯಾಲಯದ ಗ್ರಂಥಾಲಯ ಸಭಾಂಗಣದಲ್ಲಿ ಗದುಗಿನ ತೋಂಟದಾರ್ಯ ಮಠದ ಡಾ॥ ಸಿದ್ಧರಾಮಶ್ರೀಗಳ ಉದ್ಘಾಟನೆಯೊಂದಿಗೆ ಕಾರ್ಯಕ್ರಮ ಜರುಗಿತು. ಸಮಾರಂಭದ ದಿವ್ಯಸಾನಿಧ್ಯವನ್ನು ಸಾಣೆಹಳ್ಳಿಯ ಡಾ॥ ಪಂಡಿತಾರಾಧ್ಯ ಶ್ರೀಗಳು ವಹಿಸಿದ್ದರು.

ಗದುಗಿನ ತೋಂಟದಾರ್ಯ ಮಠದ ಡಾ॥ ಸಿದ್ಧರಾಮ ಶ್ರೀಗಳು ಮತ್ತೆ ಕಲ್ಯಾಣ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡುತ್ತ ಕಾಯಕ ಜೀವಿಗಳಿಂದ ೧೨ನೇ ಶತಮಾನದಲ್ಲಿ ಸಮ ಸಮಾಜದ ನಿರ್ಮಾಣಕ್ಕಾಗಿ ಕಲ್ಯಾಣದಲ್ಲಿ ಜರುಗಿದ ಕ್ರಾಂತಿಯಲ್ಲಿ ದೇಶದ ಮೂಲೆ ಮೂಲೆಗಳಿಂದ ಎಲ್ಲ ಸಮೂದಾಯ ಜನರು ಐತಿಹಾಸಿಕ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲ ರಾಜ್ಯಗಳ ಸಾಮಾನ್ಯ ಜನರು ಪಾಲ್ಗೊಂಡು ತಮ್ಮ ಬದುಕನ್ನು ಸಾಕಾರಗೊಳಿಸಿಕೊಂಡರೆಂದು ಶ್ರೀಗಳು ತಿಳಿಸಿದರು. ಸಮಾರಂಭದ ದಿವ್ಯ ಸಾನಿಧ್ಯವಹಿಸಿದ ಸಾಣೆಹಳ್ಳಿಯ ಡಾ॥ ಪಂಡಿತಾರಾಧ್ಯ ಶ್ರೀಗಳು ವಿದ್ಯಾರ್ಥಿಗಳೊಂದಿಗೆ ಸಂವಾದಿಸುತ್ತ ಶರಣರ ಚಿಂತನೆಯ ವೈಜ್ಞಾನಿಕ ಅವಿಷ್ಕಾರವಾಗಿರುವ ಇಷ್ಟಲಿಂಗ ಪೂಜೆ ಮನುಷ್ಯನ ಆತ್ಮ ಸಾಕ್ಷಾತ್ಕಾರಕ್ಕಾಗಿ ಅತ್ಯಗತ್ಯವೆಂದು ಹೇಳುತ್ತ ಅನುಭಾವದ ಮೂಸೆಯಿಂದ ಹೊರಬಂದಿರುವ ಶರಣರ ವಚನಗಳಲ್ಲಿ ಶರಣರ ವೈಜ್ಞಾನಿಕ ಸಂದೇಶ ಬಿತ್ತುವ ಅಗತ್ಯವಿದೆ ಇದಕ್ಕಾಗಿ ಸಮಾಜದಲ್ಲಿರುವ ಅಜ್ಞಾನ ಕಳೆದು ಸುಜ್ಞಾನ ಬೀಜ ಬಿತ್ತಲು ಮತ್ತೆ ಕಲ್ಯಾಣ ಹೆಸರಿನಲ್ಲಿ ಜಾಗೃತಿ ಅಭಿಯಾನ ಆರಂಭಿಸಲಾಗಿದೆ ಎಂದು ಶ್ರೀಗಳು ಹೇಳಿದರು.

ಸಮಾರಂಭದಲ್ಲಿ ಬೆಳವಿಯ ಪರಮಪೂಜ್ಯ ಶ್ರೀಗಳು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ಶಿಕ್ಷಣ ಪಡೆಯುವ ಅವಕಾಶವೇ ಇಲ್ಲದ ೧೨ನೇ ಶತಮಾನದ ಸಂದರ್ಭದಲ್ಲಿ ಶರಣರು ಶಾಲೆಗಳ ಮೆಟ್ಟಲೇರದಿದ್ದರೂ ತಮ್ಮಲ್ಲಿದ್ದ ಅಪಾರ ಅನುಭವದ ಮೂಸೆಯಿಂದ ಮೂಡಿ ಬಂದ ಜ್ಞಾನವನ್ನು ವಚನಗಳ ರಚನೆ ಮೂಲಕ ಜಗತ್ತಿಗೆ ಬಿತ್ತಿ ಸಮಾಜ ನಿರ್ಮಾಣದ ಬೆಳೆ ಬೆಳೆದರೆಂದು ತಿಳಿಹೇಳಿದರು. ಆರಂಭದಲ್ಲಿ ಶ್ರೀ ಸಂಗಮೇಶ ಬಬಲೇಶ್ವರ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಮಹಾನ್ ಮಾನವತಾವಾದಿ ಬಸವಣ್ಣ ಕೆಳವರ್ಗದ ಶೋಷಿತಜನರಿಗೆ ಸಮಾಜದಲ್ಲಿನ ಪರತಂತ್ರ



Scanned by CamScanner

ತೊರೆದು ಸ್ವಾತಂತ್ರ್ಯದ ಕಹಳೆ ಮೊಳಗಿಸಿದ್ದರು ಎಂದರು ವೇದಿಕೆ ಮೇಲೆ ಬಿ.ಎಲ್.ಡಿ.ಇ ಸಂಸ್ಥೆಯ ಚಿಂತನ ಬಳಗದ ಕಾರ್ಯಾಧ್ಯಕ್ಷರಾದ ಡಾ॥ ಮಹಾಂತೇಶ ಬಿರಾದಾರ ಹಾಗೂ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರಾಧ್ಯಕ್ಷರಾದ ಡಾ. ಎಂ.ಎಸ್. ಮದಬಾವಿ ಹಾಗೂ ಡಾ.ವ್ಹಿ.ಡಿ. ಐಹೊಳ್ಳಿ, ಪ್ರೊ. ಎ.ಬಿ. ಬೂದಿಹಾಳ ಅವರು ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ಮಹಾವಿದ್ಯಾಲಯಗಳಿಂದ ಸುಮಾರು ಐದುನೂರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅತ್ಯಂತ ಆಸಕ್ತಿಯಿಂದ ಭಾಗವಹಿಸಿ ಹಲವಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸ್ವಾಮಿಜಿಯವರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅನೇಕ ಪ್ರಶ್ನೆಗಳ ಕೇಳುವ ಮೂಲಕ ಸ್ವಾಮೀಜಿಯವರ ಗಮನಸೆಳೆದರು. ಸ್ವಾಮೀಜಿಯವರು ವಿದ್ಯಾರ್ಥಿಗಳ ವಿವೇಕಪ್ರಜ್ಞೆ, ವೈಚಾರಿಕ ಪ್ರಖರತೆ ವೈಜ್ಞಾನಿಕ ಮನೋಭಾವನೆ, ಪ್ರಬುದ್ಧತೆ, ಪ್ರೌಢಿಮೆ ಇವೆಲ್ಲವುಗಳನ್ನು ವಿದ್ಯಾರ್ಥಿಗಳಲ್ಲಿ ಗಮನಿಸಿ ಅತ್ಯಂತ ಅನಂದಪಟ್ಟು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಸಾಣೇ ಹಳ್ಳಿಯ ಪರಮ ಪೂಜ್ಯ ಸ್ವಾಮೀಜಿವರು ಕೊನೆಯಲ್ಲಿ 'ಶರಣರು

ಕಟ್ಟ ಬಯಸಿದ್ದು, ಮಂದಿರ ಮಠಗಳನ್ನಲ್ಲ,
ಮನಸ್ಸುಗಳನ್ನು, ಮನಸ್ಸು ಕಟ್ಟುವ
ಕ್ರಿಯೆಯಲ್ಲಿ ಯಶಸ್ವಿಯಾದರೆ ಮುಂದೆ
ಏನು ಬೇಕಾದರು ಕಟ್ಟಬಹುದು. ಈ ಪ್ರಜ್ಞೆ
ಇಂದು ವಿವಿಧ ಕ್ಷೇತ್ರದ ಮುಖಂಡರಿಗೆ
ಬರಬೇಕಾಗಿದೆ. ಅದಕ್ಕಾಗಿಯೇ ಮತ್ತೆ
ಕಲ್ಯಾಣದ ಚಿಂತನೆ'
ಒಡೆದ ಮನಸ್ಸುಗಳನ್ನು
ಒಂಡುಗೂಡಿಸಲು ಮತ್ತೆ ಕಲ್ಯಾಣದ
ದಾರಿಯಲ್ಲಿ ನಡೆಯೋಣ ಎಲ್ಲರೂ ಬನ್ನಿ.

"ಶುಭಂ"

ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಬಿ.ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ, ಮಹಾವಿದ್ಯಾಲಯ, ವಿಜಯಪುರ



Scanned by CamScanner

RNI Regd. No. KARBIL/2014/54464
Postal Regd. No/ PMG/KA/NK/BJP/60/2017-19



## ಸಾಮಾನ್ಯರ ಜಗತ್ತು

ನಾವೆಲ್ಲರೂ ಸಾಮಾನ್ಯರಿದ್ದೇವೆ
ಮನದಿಂದ, ಮೆದುಳಿನಿಂದಲೂ
ಭಾವನೆಯಿಂದ, ಪ್ರಜ್ಞೆಯಿಂದಲೂ
ಬುದ್ಧಿಯಿಂದ ವಿವೇಕದಿಂದಲೂ
ಯಾಕೆಂದರೆ ನಾವು ಜನರಿದ್ದೇವೆ
ಸಾಮಾನ್ಯರಾಗಿದ್ದೇವೆ
ವಿಶಿಷ್ಟತೆ ಇಲ್ಲ
ಯಾಕೆಂದರೆ ಜಗವೆಲ್ಲ
ಬೇಡುತಿದೆ ಸಾಮಾನ್ಯರೆ ಇರಲಿ
ಇಲ್ಲವಾದರೆ ಸಿಗುವರೆ–
ಭಾಷಣಕಾರರಿಗೆ ಕೇಳುಗ
ನಾಯಕರಿಗೆ ಹಿಂಬಾಲಕ
ಬುದ್ಧಿವಂತರಿಗೆ ಓದುಗ
ಆಂದೋಲನಗಳಿಗೆ ಜನಜಗುಂಳಿ
ಧರ್ಮಗಳಿಗೆ ಭಕ್ತ
ಜಾತಿವಾದಿಗಳಿಗೆ ಬುದ್ಧಿಮಂದ
ರಾಜ್ಯಗಳಿಗೆ ಗುಮಾಸ್ತ
ಕಾರಖಾನೆಗಳಿಗೆ ಶ್ರಮಿಕ
ತೋಪುಗಳಿಗೆ ಆಹಾರ
ಪಾರ್ಟಿ–ಬ್ರಾಸ್‌ಗಳಿದಗೆ ಜೀ ಹುಜುರ್
ರಾಜರಿಗೆ ಗುಲಾಮ
ಆಳುವವರಿಗೆ ಅಂಧ
ಪ್ರಜಾ ಪ್ರಭುತ್ವಕ್ಕೆ ಸಾದಾರಣ ಜನ
ವಿಚಾರವಾದಿಗಳಿಗೆ ಮೂರ್ಖರುಸೈನ್ಯವಾದಿಗಳಿಗೆ
ಅಚ್ಚಿನ ಮನುಷ್ಯ
ನಾವೆಲ್ಲರೂ ಇದಕ್ಕಾಗಿಯೇ
ಯುಗ–ಯುಗಗಳಿಂದ ಜೀವಿಸುತ್ತೇವೆ
ಗುಲಾಮರಾಗಿದ್ದೇವು ನಾವು
ಇತಿಹಾಸ ವಸ್ತ್ರ ಹೊಲಿಯುತ್ತೇವೆ
ಇತಿಹಾಸ ಅವರದ್ದಾಗಿದೆ
ನಾವೆಲ್ಲ ಶಾಹಿ
ವಿಜಯವೆಲ್ಲ ಅವರಿಗೆ
ನಾವು ಗಾಯಗೊಂಡ ಸೈನಿಕರು
ಯಾವಾಗಲೂ ನಾವು
ಗಾಯಗೊಂಡಿರಬೇಕು
ರಾಕ್ಷಸರ ಕೆಲಸ ಮಾಡುತ್ತಾ
ಸಾಮಾನ್ಯರಾಗಿಯೇ ಇರಬೇಕು.

– ಗಿರಿಜಾಕುಮಾರ ಮಾಥುರ
ಅವರ ಹಿಂದಿ ಕವಿತೆ ಕನ್ನಡಕ್ಕೆ ಅನುವಾದ

ISSN 2320-0371

**सौम्य प्रकाशन**
'कबीर कुंज' महाबलेश्वर कॉलनी,
दर्गा जेल के सामने,
विजयपुर - 586103 (कर्नाटक)

**ಸೌಮ್ಯ ಪ್ರಕಾಶನ**
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

Scanned by CamScanner